**ದಿನಾಂಕಃ 06.11.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ಶ್ರೀ ಪಿ.ಎಸ್ ವಕೀಲರಿಂದಃ**

ನಾನು 7 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನಗೆ ಓದಲು ಮತ್ತು ಬರೆಯಲು ಬರುತ್ತದೆ. ಈ ದಾವೆಯಲ್ಲಿ ಸಲ್ಲಿಸಿರುವ ವಾದಪತ್ರ ಮತ್ತು ಪ್ರತಿವಾದಪತ್ರವನ್ನು ನಾನು ಓದಿಸಿ ತಿಳಿದುಕೊಂಡಿರುತ್ತೇನೆ. ಅದೇ ರೀತಿ ಈ ದಾವೆಯಲ್ಲಿ ಹಾಜರುಪಡಿಸಿರುವ ಎಲ್ಲಾ ದಾಖಲಾತಿಗಳನ್ನು ಓದಿಸಿ ತಿಳಿದುಕೊಂಡಿರುತ್ತೇನೆ. ಖಾತಾ ಸಂ.135/2 ರ ಆಸ್ತಿಗೆ ಸಂಬಂಧಿಸಿದಂತೆ ಈ ದಾವೆಯ ವಾದಿಯು ಅಸಲು ದಾವಾ ಸಂ.51/2022 ನ್ನು ಸಲ್ಲಿಸಿದ್ದಾರೆ ಎಂದರೆ ಸರಿ. ಸರ್ವೇ ನಂ.126/5 ರ 27 ಗುಂಟೆ ಜಮೀನಿಗೆ ಸಂಬಂಧಿಸಿದಂತೆ ನಾವುಗಳು ಸಲ್ಲಿಸಿರುವ ಅಸಲು ದಾವಾ ಸಂ.229/2018 ರ ದಾವೆಯು ವಿಚಾರಣೆಗೆ ಬಾಕಿ ಇದೆ ಎಂದರೆ ಸರಿ. ಸದರಿ ಅಸಲು ದಾವಾ ಸಂ.229/2018 ರ ದಾವೆಯಲ್ಲಿ ನಾನು, ಸೋಮಣ್ಣ, ರಾಜು ಮತ್ತು ನನ್ನ ತಂದೆಯವರ ಪರವಾಗಿ ಸಾಕ್ಷ್ಯ ನುಡಿದಿದ್ದೇನೆ ಎಂದರೆ ಸರಿ. ಸಾಕ್ಷಿದಾರರಿಗೆ ಅಸಲು ದಾವಾ ಸಂ.229/2018 ರಲ್ಲಿನ ಸಾಕ್ಷ್ಯ ಮುಖ್ಯ ವಿಚಾರಣೆ ಪ್ರಮಾಣ ಪತ್ರ ಮತ್ತು ಪಾಟೀ ಸವಾಲಿನ ದೃಡೀಕೃತ ನಕಲನ್ನು ತೋರಿಸಲಾಗಿ ಸಾಕ್ಷಿದಾರರು ಅದನ್ನು ನೋಡಿ ಒಪ್ಪಿಕೊಂಡಿದ್ದರಿಂದ ಸದರಿ ದಾಖಲಾತಿಯನ್ನು **ನಿಪಿ-19** ಎಂದು ಗುರುತಿಸಲಾಯಿತು.

ನಿಡಿ-4 ರ ವಿಭಾಗ ಪತ್ರ ಆಗುವ ಪೂರ್ವದಲ್ಲಿ ಸರ್ವೇ ನಂ.126/4 ರ ಜಮೀನು ಮತ್ತು ಸರ್ವೇ ನಂ.135/7 ರ ಜಮೀನುಗಳ ಖಾತೆಗಳು ಪುಟ್ಟಮಾದಮ್ಮರವರ ಹೆಸರಿನಲ್ಲಿ ದಾಖಲಾಗಿದ್ದವು ಎಂದರೆ ಸರಿ. ಸದರಿ ಆಸ್ತಿಗಳು ಪುಟ್ಟಮಾದಮ್ಮರವರ ಹೆಸರಿಗೆ ಬಾಯಿ ಮಾತಿನ ವಿಭಾಗದ ಮೂಲಕ ಬಂದಿದ್ದವು. ಸದರಿ ಬಾಯಿ ಮಾತಿನ ವಿಭಾಗ ಯಾವಾಗ ಆಯಿತು ಎಂದು ನನಗೆ ಗೊತ್ತಿಲ್ಲ. ಸದರಿ ಬಾಯಿ ಮಾತಿನ ವಿಭಾಗದ ಮೂಲಕ ಸರ್ವೇ ನಂ.126/4 ರ ಜಮೀನು ಪುಟ್ಟಮಾದಮ್ಮರವರ ಭಾಗಕ್ಕೆ ಮತ್ತು 126/5 ರ ಜಮೀನು ನನ್ನ ತಂದೆಯ ಭಾಗಕ್ಕೆ ಬಂದಿದ್ದವು. ಸದರಿ ಬಾಯಿಮಾತಿನ ವಿಭಾಗದ ಸಂದರ್ಭದಲ್ಲಿ ಪುಟ್ಟಮಾದಮ್ಮರವರ ಗಂಡನಾದ ಸಿದ್ದೇಗೌಡರವರು ಬದುಕಿದ್ದರು. ಸಾಮಾನ್ಯವಾಗಿ ಸಹೋದರರು ವಿಭಾಗ ಮಾಡಿಕೊಂಡರೇ ಆಸ್ತಿಗಳ ಖಾತೆಗಳು ಸಹೋದರರ ಹೆಸರಿಗೆ ದಾಖಲಾಗುತ್ತವೆ ಎಂದರೆ ಸರಿ. ನಾನು ಹೇಳಿದ ಬಾಯಿ ಮಾತಿನ ವಿಭಾಗದ ಮೂಲಕ ಪುಟ್ಟಮಾದಮ್ಮರವರ ಗಂಡನ ಹೆಸರಿಗೆ ಯಾವುದೇ ಆಸ್ತಿಗಳು ಖಾತೆ ದಾಖಲಾಗಿರುವುದಿಲ್ಲ. ಸದರಿ ಬಾಯಿ ಮಾತಿನ ವಿಭಾಗವಾದ ಸಂದರ್ಭದಲ್ಲಿ ಸರ್ವೇ ನಂ.126/4, 126/5 ರ ಆಸ್ತಿಗಳ ಜೊತೆಗೆ

ಬೇರೆ ಬೇರೆ ಆಸ್ತಿಗಳು ಕೂಡಾ ನಮ್ಮ ಕುಟುಂಬಕ್ಕೆ ಇದ್ದವು. ಸದರಿ ಸ್ವತ್ತುಗಳು ವಿಭಾಗವಾಗಿ ಸದರಿಯವರ ಹೆಸರಿಗೆ ಖಾತೆ ದಾಖಲಾದ ಬಗ್ಗೆ ದಾಖಾತಿಗಳನ್ನು ಹಾಜರುಪಡಿಸಿರುವುದಿಲ್ಲ. ಸದರಿ ಸರ್ವೇ ನಂ.126/5ರ ಜಮೀನಿನ ಖಾತೆಯು ಐ.ಎನ್.ಎಚ್ ನಂ.4/1997-98 ರಂತೆ ಪೌತಿ ವಾರಸು ಆಧಾರದ ಮೇಲೆ ದಾಖಲಾಗಿದೆ ಎಂದರೆ ಸರಿ. ಸಾಕ್ಷಿದಾರರಿಗೆ ಐ.ಎನ್.ಎಚ್ ನಂ.4/1997-98 ದಾಖಲಾತಿಯ ಧೃಡೀಕೃತ ನಕಲನ್ನು ತೋರಿಸಲಾಗಿ ಸಾಕ್ಷಿದಾರರು ಅದನ್ನು ನೋಡಿ ಒಪ್ಪಿಕೊಂಡಿದ್ದರಿಂದ ಸದರಿ ದಾಖಲಾತಿಯನ್ನು **ನಿಪಿ-20** ಎಂದು ಗುರುತಿಸಲಾಯಿತು.

ನನ್ನ ತಂದೆಯ ಹೆಸರು ಕರಿಬಸವೇಗೌಡ ಮತ್ತು ನನ್ನ ತಂದೆಯ ದತ್ತು ತಂದೆ ಎಂದು ಹೇಳುವವರ ಹೆಸರು ಸಹ ಕರಿಬಸವೇಗೌಡ ಆಗಿರುತ್ತದೆ. ನನ್ನ ತಾತನ ಹೆಸರು ಕುಳ್ಳೇಗೌಡ ಯಾನೆ ಮಾದೇಗೌಡ. ನನ್ನ ತಾತ ಕುಳ್ಳೇಗೌಡ ಯಾನೆ ಮಾದೇಗೌಡರವರಿಗೆ ಯಳವೇಗೌಡ ಮತ್ತು ಕರಿಬಸವೇಗೌಡ ಎಂಬ ಸಹೋದರರು ಎಂದರೆ ಸರಿ. ನನ್ನ ಮತ್ತು ನನ್ನ ಸಹೋದರರ ಹೆಸರಿಗೆ ಐ.ಎನ್.ಎಚ್ ನಂ.4/1997-98 ರಂತೆ ಖಾತೆ ದಾಖಲಾಗುವ ಸಂದರ್ಭದಲ್ಲಿ ನನ್ನ ತಂದೆ ಕರಿಬಸವೇಗೌಡರವರು ಬದುಕಿದ್ದರು. ಸದರಿ ಸಂದರ್ಭದಲ್ಲಿ ನನ್ನ ತಂದೆಯ ಸಹೋದರ ಸಿದ್ದೇಗೌಡರವರು ನನ್ನ ಪ್ರಕಾರ ಮರಣ ಹೊಂದಿದ್ದರು.

ನನ್ನ ತಂದೆ ಕರಿಬಸವೇಗೌಡರವರು 7-8 ನೇ ತರಗತಿಯವರೆಗೂ ವಿಧ್ಯಾಭ್ಯಾಸ ಮಾಡಿರುತ್ತಾರೆ. ಸದರಿ ಶಾಲಾ ದಾಖಲಾತಿಗಳಲ್ಲಿ ನನ್ನ ತಂದೆಯ ತಂದೆ ಹೆಸರು ಏನೆಂದು ನಮೂದಾಗಿದೆ ಎಂದು ನನಗೆ ಗೊತ್ತಿಲ್ಲ. ಸದರಿ ಶಾಲಾ ದಾಖಲಾತಿಗಳಲ್ಲಿ ನನ್ನ ತಂದೆಯ ಹೆಸರು ಕರಿಬಸವೇಗೌಡ ಬಿನ್ ಮಾದೇಗೌಡ ಎಂದು ನಮೂದಾಗಿದೆ ಎಂದರೆ ನನಗೆ ಗೊತ್ತಿಲ್ಲ. ನನ್ನ ತಂದೆಯ ಶಾಲಾ ದಾಖಲಾತಿಗಳು ತುಂಬಾ ಹಳೆಯ ದಾಖಲಾತಿಗಳಾಗಿದ್ದರಿಂದ ಸದರಿ ದಾಖಲಾತಿಗಳು ಲಭ್ಯವಿರುವುದಿಲ್ಲ ಎಂದು  ನನ್ನ ತಂದೆಯು ನನಗೆ ತಿಳಿಸಿರುತ್ತಾರೆ. ನಾನು ನನ್ನ ತಂದೆಯ ಶಾಲಾ ದಾಖಲಾತಿಗಳನ್ನು ಪಡೆದುಕೊಳ್ಳಲು ಪ್ರಯತ್ನಿಸಿರುವುದಿಲ್ಲ.

ದಾವಾ 1 ಮತ್ತು 2ನೇ ಆಸ್ತಿಗಳ ಖಾತೆಗಳು ನನ್ನ ತಂದೆಯ ಹೆಸರಿಗೆ ದಾಖಲಾಗಿದ್ದ ಬಗ್ಗೆ ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ. ದಾವಾ-1 ಮತ್ತು 2ನೇ ಆಸ್ತಿಗಳ ಖಾತೆಗಳು ನಮ್ಮ ಹೆಸರಿಗೆ ವರ್ಗಾವಣೆ ಆಗುವ ಪೂರ್ವದಲ್ಲಿ ಸದರಿ ಆಸ್ತಿಗಳ ಖಾತೆಗಳು ಕುಳ್ಳೇಗೌಡರವರ ಹೆಸರಿನಲ್ಲಿ ದಾಖಲಾಗಿದ್ದವು ಎಂದರೆ ಸರಿ. ನನ್ನ ತಂದೆಯ ದತ್ತು ತಂದೆ ಎಂದು

ಹೇಳುವ ಕರಿಬಸವೇಗೌಡರವರ ಹೆಂಡತಿಯ ಹೆಸರು ಪುಟ್ಟಲಿಂಗಮ್ಮ. ಅದೇ ರೀತಿ ನನ್ನ ತಾಯಿಯ ಹೆಸರು ಸಹ ಪುಟ್ಟಲಿಂಗಮ್ಮ ಆಗಿರುತ್ತದೆ.

**ಮುಂದುವರಿದ ಪಾಟೀಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಕಾಲಾವಕಾಶ ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

ಹೆಚ್ಚುವರಿ ಸಿವಿಲ್ ಮತ್ತು ಜೆ ಎಮ್ ಎಫ್ ಸಿ
ನ್ಯಾಯಾಧೀಶರು, ತಿ.ನರಸಿಪುರ.